**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 92/2019**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀನಿವಾಸಮೂರ್ತಿ | ಫ್ರಾಸಾಃಃ 1 |
| ತಂದೆ ಹೆಸರುಃ | ಬಸವರಾಜು ಎಸ್ | ಚಾಸಾಃಃ 2 |
| ವಯಸ್ಸುಃ | 42 ವರ್ಷ | ಪ್ರಮಾಣೀಕರಿಸಿದ<br>ದಿಃ 20/02/2024 |
| ಉದ್ಯೋಗಃ | ಅಬಕಾರಿ ಕನ್ಸ್ಟೇಬಲ್ | |
| ವಾಸ ಸ್ಥಳಃ | ಹುಣಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನಾನು ದಿಃ09/09/2011 ರಿಂದ 04/01/2023 ರವರೆಗೆ ಅಬಕಾರಿ ಪೇದೆಯಾಗಿ ಅಬಕಾರಿ ನಿರೀಕ್ಷಕರ ಕಚೇರಿ, ಪಿರಿಯಾಪಟ್ಟಣ ವಲಯದಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ06/05/2018 ರಂದು ವಿಧಾನ ಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಅಬಕಾರಿ ಉಪ ಆಯುಕ್ತರ ಕಚೇರಿಯ ನಿರೀಕ್ಷಕರಾದ ನಾಗರಾಜು, ಚಾಸಾ-1 ಹಾಗೂ ವಾಹನ ಚಾಲಕ- ಚಾಸಾ-3 ರವರೊಂದಿಗೆ ನಮ್ಮ ಕಚೇರಿಗೆ ಬಂದು, ನಮ್ಮ ಕಚೇರಿಯ ಅಬಕಾರಿ ನಿರೀಕ್ಷಕರಾದ ಸುನೀಲ್ ಹಾಗೂ ನನ್ನನ್ನು ಇಲಾಖಾ ವಾಹನ ಕೆಎ-09-ಜಿ-745 ರಲ್ಲಿ ಮೈಸೂರು-ಮಡಿಕೇರಿ ಮುಖ್ಯ ರಸ್ತೆಯ ಬೈಲಕುಪ್ಪೆ ಗ್ರಾಮದಲ್ಲಿ ರಸ್ತೆಗಾವಲು ನಡೆಸುತ್ತಿದ್ದಾಗೆ ಅಬಕಾರಿ ನಿರೀಕ್ಷಕರಿಗೆ ಬಂದ ಮಾಹಿತಿ ಮೇರೆಗೆ ಬೈಲಕುಪ್ಪೆ ಹಳಿಯೂರು ಗ್ರಾಮದ ಸೌಮ್ಯ ಕೋಂ ಲಕ್ಷ್ಮಣ ಎಂಬುವವರ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿದ್ದು, ಸದರಿ ಸ್ಥಳಕ್ಕೆ ತೆರಳಿ ಅಲ್ಲಿ ನೆರೆದಿದ್ದ ಜನರಿಗೆ ನಮ್ಮನ್ನು ಪರಿಚಯ ಮಾಡಿಕೊಂಡು ಸೌಮ್ಯ ರವರ ಮನೆಯನ್ನು ತೋರಿಸಲು ಕೇಳಿರುತ್ತೇವೆ. ಅವರು ಒಪ್ಪಿ ಮನೆ ತೋರಿಸಿರುತ್ತಾರೆ. ನಾವು ಅವರ ಮನೆಯ ಮುಂದೆ ಬಂದಾಗ ಒಬ್ಬ ಹೆಂಗಸು ನಮ್ಮನ್ನು ನೋಡಿ ಓಡಿ ಹೋದರು. ಅನುಮಾನ ಬಂದ ನಾವುಗಳು ಸದರಿ ಮನೆಯನ್ನು ತಪಾಸಣೆ

ನಡೆಸಲು ಅಲ್ಲೆ ಹಾಜರಿದ್ದ ಜನರಿಗೆ ಮತ್ತು ಅಕ್ಕಪಕ್ಕದ ಮನಯವರಿಗೆ ಸಾಕ್ಷಿದಾರರಾಗಿ ಸಹಕರಿಸಲು ಕೋರಿದಾಗ ಯಾರೊಬ್ಬರು ಮುಂದೆ ಬರಲು ನಿರಾಕರಿಸಿದರು. ನಂತರ ಇಲಾಖಾ ಸಿಬ್ಬಂದಿಗಳನ್ನು ಸಾಕ್ಷಿದಾರರನ್ನಾಗಿ ಮಾಡಿಕೊಂಡು, ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಕಾಲವಕಾಶ ಇಲ್ಲದ ಕಾರಣ ಸ್ಥಳದಲ್ಲಿ ಅಧಿಕಾರಿಯವರು ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ, ಪರಸ್ಪರ ಅಂಗಶೋಧಿಸಿ ಮನೆಯನ್ನು ಪ್ರವೇಶಿಸಿ ಮನೆಯ ಹಾಲ್ ಮತ್ತು ಅಡುಗೆ ಮನೆಯನ್ನು ಪ್ರವೇಶಿಸಿ, ನಂತರ ಮನೆಗೆ ಹೊಂದಿಕೊಂಡಂತೆ ಒಂದು ಬಿಳಿಯ ಬಣ್ಣದ ಪ್ಲಾಸ್ಟಿಕ್ ಚೀಲ ಕಂಡುಬಂದಿದ್ದು ಅದನ್ನು ತೆರೆದು ನೋಡಲಾಗಿ,ಚಿ ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್‌ಗಳು ಇದ್ದವು. ಅವುಗಳನ್ನು ಸುರಿದು ಪರಿಶೀಲೀಸಲಾಗಿ ಅದು 180 ಎಂ.ಎಲ್.ನ 27 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳು, 90 ಎಂ.ಎಲ್.ನ 20 ಹೈವಾರ್ಡ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳು, 90 ಎಂ.ಎಲ್.ನ 15 ಬೆಂಗಳೂರು ಮಾರ್ಟ್ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು, 90 ಎಂ.ಎಲ್.ನ 9 ಒಲ್ಡ್ ಟಾವೆರೆನ್ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳು, 90 ಎಂ.ಎಲ್.ನ 5 ಕೋಡೇಸ್ ರಮ್ ನ ಟೆಟ್ರಾ ಪ್ಯಾಕೇಟ್‌ಗಳು ಕಂಡುಬಂದಿರುತ್ತವೆ. ಒಟ್ಟು 9.270 ಲೀಟರ್ ಮದ್ಯ ಕಂಡು ಬಂದಿರುತ್ತದೆ. ಪಕ್ಕದ ಮನೆಯವರಿಗೆ ಈ ಮನೆ ಯಾರಿಗೆ ಸೇರಿದ್ದು ಎಂದು ಕೇಳಲಾಗಿ, ಸೌಮ್ಯ ಕೋಂ ಲಕ್ಷಣ, 28 ವರ್ಷ, ಹಳೆ ಬೈಲಕುಪ್ಪೆ ಗ್ರಾಮ ಎಂದು ತಿಳಿಸಿದರು. ನಂತರ ಅಧಿಕಾರಿಗಳು ಈ ರೀತಿ ಅಕ್ರಮವಾಗಿ ಮದ್ಯವನ್ನು ದಾಸ್ತಾನು ಮಾಡುವುದು ಕರ್ನಾಟಕ ಅಬಕಾರಿ ಕಾಯಿದೆ ವಿರುದ್ಧ ಎಂದು ತಿಳಿಸಿರುತ್ತಾರೆ. ಎಲ್ಲಾ ಮದ್ಯವನ್ನು ಇಲಾಖಾ ವಶಕ್ಕೆ ಪಡೆದುಕೊಳ್ಳಲಾಯಿತು. ವಶಪಡಿಸಿಕೊಂಡ ಮದ್ಯದ ಪೈಕಿ ರಾಸಾಯಿನಿಕ ಪರೀಕೆಗಾಗಿ ಎಲ್ಲಾ ಬ್ರಾಂಡ್ ಗಳಿಂದ ತಲಾ 2 ರಂತೆ ಮಾದರಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ, ಅರಗಿನ ಸಹಾಯದಿಂದ 298 ಇಲಾಖಾ ಸೀಲನ್ನು ಹಾಕಿರುತ್ತೇವೆ. ಮಾದರಿ ಸೀಲನ್ನು ತಯಾರಿಸಿ ಇಲಾಖಾ ಸಿಬ್ಬಂದಿಗಳ ಸಹಿ ಪಡೆದು, ಸಣ್ಣ ಚೀಟಿಗಳಲ್ಲಿ ವಿವರ ಬರೆದು ಮುದ್ದೇಮಾಲುಗಳ ಮೇಲೆ ಅಂಟಿಸಲಾಯಿತು. ಕೃತ್ಯ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಶ್ರೀನಿವಾಸರವರ ಮನೆ, ಉತ್ತರಕ್ಕೆ ಸರೋಜರವರ ಮನೆ, ದಕ್ಷಿಣಕ್ಕೆ ಲಕ್ಷ್ಮಣರವರಿಗೆ ಸೇರಿದ ಮನೆ ಇರುತ್ತದೆ. ಈ ಸಂಬಂಧ ಸ್ಥಳದಲ್ಲಿ ಮಹಜರ್ ಜರುಗಿಸಿ, ಮಹಜರ್ ನ್ನು ಸಂಜೆ 5.45 ರಿಂದ 6.45 ರವರೆಗೆ ಮನೆಯ ದೀಪದ ಸಹಾಯದಿಂದ ನಾನೇ ಬರೆದಿರುತ್ತೇನೆ. ನಂತರ ನನ್ನ ಹೇಳಿಕೆಯನ್ನು ಅಧಿಕಾರಿಗಳಿಗೆ ಕೊಟ್ಟೆ. ಸಾಕ್ಷಿಯು ಮಹಜರ್

ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು.

3. ಆ ದಿನ ವಶಪಡಿಸಿಕೊಂಡ ಮಾಲನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಒಟ್ಟಾರೆಯಾಗಿ **ಮು.ಮಾ.1** ಎಂದು ಗುರುತಿಸಲಾಯಿತು. ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ** ಶ್ರೀ ಕೆ.ಬಿ.ಎಸ್ **ವಕೀಲರಿಂದಃ**

4. ನಾವು ಠಾಣೆಯನ್ನು ಬಿಟ್ಟಾಗ ಸುಮಾರು 5.00 ಗಂಟೆ ಆಗಿತ್ತು. ಆ ದಿನ ನಾವು ಚಿಟ್ಟೇನಹಳ್ಳಿ ಮತ್ತು ಬೈಲಕುಪ್ಪೆಯ ಮುಖ್ಯ ರಸ್ತೆಯಲ್ಲಿ ಗಸ್ತು ಮಾಡಿದೆವು. ನಾವು ನೇರವಾಗಿ ಬೈಲಕುಪ್ಪೆ ಗ್ರಾಮಕ್ಕೆ ಹೋದೆವು. ನಮಗೆ ಮಾಹಿತಿ ಬಂದಾಗ ನಾವು ಬೈಲಕುಪ್ಪೆ ಗ್ರಾಮದಲ್ಲಿ ಇದ್ದೆವು. ಚಾಸಾ–1ರವರಿಗೆ ದೂರವಾಣಿ ಮುಖಾಂತರ ಮಾಹಿತಿ ಬಂದಿರುತ್ತದೆ. ಯಾವ ಸಮಯಕ್ಕೆ ಮಾಹಿತಿ ಬಂತೆಂದು ಗೊತ್ತಿಲ್ಲ. ಬೈಲಕುಪ್ಪೆ ಮುಖ್ಯ ರಸ್ತೆಗೂ ಮತ್ತು ಆರೋಪಿಯ ಮನೆಗೂ ಸುಮಾರು 700 ಮೀಟರ್ ಅಂತರ ಇದೆ. ಸಾರ್ವಜನಿಕರು ಆರೋಪಿಯ ಹೆಸರು ವಿಳಾಸ ತಿಳಿಸಿದರು, ಆದರೆ ಸಾರ್ವಜನಿಕರ ಹೆಸರು ಗೊತ್ತಿಲ್ಲ. ಸ್ಥಳದ ಅಕ್ಕಪಕ್ಕ ವಾಸದ ಮನೆಗಳು ಇವೆ ಎಂದರೆ ಸರಿ. ಸಾರ್ವಜನಿಕರು ಸದಾಕಾಲ ಓಡಾಡುತ್ತಿರುತ್ತಾರೆ ಎಂದರೆ ಸರಿ. ನಮ್ಮ ಪೈಕಿ ನಾನೇ ಮೊದಲಿಗೆ ಹೋಗಿದ್ದೆ. ಮನೆಯಲ್ಲಿ ಯಾರೂ ಇರಲಿಲ್ಲ, ಆದ್ದರಿಂದ ನೋಟೀಸು ಕೊಡಲಿಲ್ಲ. ಮನೆಯ ವಿಸ್ತೀರ್ಣ ಗೊತ್ತಿಲ್ಲ. ನನ್ನ ಹೇಳಿಕೆಯಲ್ಲಿ ಅಡುಗೆ ಮನೆಯ ಹಿಂಭಾಗದಲ್ಲಿ ಒಂದು ಬಿಳಿ ಚೀಲದಲ್ಲಿ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಬಿಳಿ ಚೀಲ ಈ ದಿನ ನ್ಯಾಯಾಲಯದ ಮುಂದೆ ಇಲ್ಲ. ಮನೆಗೆ ಹೊಂದಿಕೊಂಡಂತೆ ಮನೆಯ ಹೊರಗೆ ಬಿಳಿ ಚೀಲ ಇತ್ತು. ಚೀಲ ಇದ್ದ ಜಾಗ ಯಾರದ್ದು ಎಂದು ನಿಖರವಾಗಿ ತಿಳಿಸಲು ಸಾಧ್ಯವಿಲ್ಲ. ಮು.ಮಾ.1 ರೀತಿಯ ಮಾಲುಗಳು ನಮ್ಮ ಕಚೇರಿಯಲ್ಲಿ ಇರುತ್ತವೆ ಎಂದರೆ ಸರಿ. ಆರೋಪಿ ಬಳಿ ಯಾವುದೇ ಮದ್ಯದ ಚೀಲ ಇರಲಿಲ್ಲ, ಅದು ಆರೋಪಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಚುನಾವಣಾ ಪ್ರಯುಕ್ತ ಹಿರಿಯ ಅಧಿಕಾರಿಗಳ ಮಾತು ಕೇಳಿ ಆರೋಪಿಯ ವಿರುದ್ಧ ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಕಚೇರಿಯಲ್ಲಿದ್ದ ಮು.ಮಾ.1ನ್ನು ಈ ಕೇಸಿಗೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದಲ್ಲಿ ಮೊದಲ ಬಾರಿಗೆ

ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯ ಆರೋಪಿಗೆ ಸೇರಿದ್ದಲ್ಲ ಎಂದರೆ ನನಗೆ ಗೊತ್ತಿಲ್ಲ. ಮುದ್ದೇಮಾಲುಗಳ ತಯಾರಿಕಾ ದಿನಾಂಕ, ಬ್ಯಾಚ್ ನಂಬರ್ ಮತ್ತು ಕಂಪನಿಯ ಹೆಸರು ಗೊತ್ತಿಲ್ಲ. ನನ್ನ ಹಿರಿಯ ಅಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ದಾಳಿ ಸಮಯದಲ್ಲಿ ಆರೋಪಿಯಿಂದ ಹಣಕೊಟ್ಟು ಮದ್ಯವನ್ನು ಖರೀಸುತ್ತಿದ್ದವರು ಯಾರೂ ಇರಲಿಲ್ಲ. ಆರೋಪಿಯನ್ನು ಹಿಡಿಯಲು ನಾವು ಪ್ರಯತ್ನಿಸಲಿಲ್ಲ. ಮಹಜರ್ ನ್ನು ಠಾಣೆಯಲ್ಲಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಯಾವುದೇ ಮುದ್ದೇಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಈ ಕೃತ್ಯದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**